eISBN: 978-81-686924-4-2

# CHAPTER-35

# ಯಾದಗಿರಿ ಪರಿಸರದ ಹೊಲೆಯರ ಕನ್ನಡದ ಬಹುವಚನ ಪ್ರತ್ಯಯಗಳು

**Kannada plural suffixes of the Holeyas of the Yadgir area**

Karilinga Natikar
Research Scholar, Dep of Kannada, Central University of Karnataka,
karilinga80@gmail.com
https://doi.org/10.66483/jsp.2026.001.ch35

ಯಾವುದೇ ಒಂದು ಭಾಷೆಯನ್ನು ಅಧ್ಯಯನ ಮಾಡುವುದಕ್ಕೆ ಹಲವಾರು ದಾರಿಗಳಿರುತ್ತವೆ. ಒಂದು ಬಳಕೆಯಲ್ಲಿರುವ ಭಾಷೆಯನ್ನು ಅಧ್ಯಯನ ಮಾಡುವುದು. ಇನ್ನೊಂದು ವಿವಿಧ ಮಾಧ್ಯಮಗಳಲ್ಲಿ ಬಳಕೆಯಾಗಿರುವ ಭಾಷೆಯನ್ನು ಅಧ್ಯಯನ ಮಾಡುವುದು. ಮೊದಲನೆಯದು ಪ್ರಾಥಮಿಕ ಆಕರವನ್ನು ಬಳಸಿಕೊಂಡ ಅಧ್ಯಯನವಾದರೆ, ಎರಡನೆಯದು ಆನುಷಂಗಿಕ ಆಕರಗಳನ್ನು ಬಳಸಿಕೊಂಡ ಅಧ್ಯಯನವಾಗುತ್ತದೆ. ಈ ಲೇಖನವು ಮೊದಲನೆಯ ಅಂಶವಾದ ಪ್ರಾಥಮಿಕ ಆಕರವನ್ನು ಬಳಸಿಕೊಂಡು, ಮಾಹಿತಿದಾರರು ನೀಡಿದ ಮಾಹಿತಿಯನ್ನು ಬಳಸಿಕೊಂಡು ಈ ಅಧ್ಯಯನ ಕೈಗೊಳ್ಳಲಾಗಿದೆ.

ಕನ್ನಡ ಭಾಷೆಯು ಹಲವು ಪ್ರಾದೇಶಿಕ ಒಳನುಡಿಗಳನ್ನು ಹೊಂದಿದೆ. ಮತ್ತು ಒಂದು ಪ್ರಾದೇಶಿಕ ವಲಯದಲ್ಲಿ ಹಲವು ಸಾಮಾಜಿಕ ಒಳನುಡಿಗಳು ಬಳಕೆಯಲ್ಲಿರುತ್ತವೆ. ಉದಾರಣೆಗೆ ಹೊಲೆಯ ಕನ್ನಡ, ಮಾದಿಗ ಕನ್ನಡ, ಬ್ರಾಹ್ಮಣ ಕನ್ನಡ, ಒಕ್ಕಗಲಿಗ ಕನ್ನಡ ಮುಂತಾದವು. ಎಲ್ಲಾ ಸಾಮಾಜಿಕ ಒಳನುಡಿಗಳು ಮೇಲುನೋಟಕ್ಕೆ ಒಂದೆಯಾಗಿ ಕಂಡರು, ಅವುಗಳನ್ನು ಅಧ್ಯಯನ ಮಾಡದೇ ಹಾಗೆ ಹೇಳುವುದು ಸಾಧ್ಯವಿಲ್ಲ. ಒಂದು ಸಾಮಾಜಿಕ ಒಳನುಡಿಯ ಅಧ್ಯಯನ ಮಾಡಿದಾಗ ಆ ಭಾಷೆಯ ಬಳಕೆ ಮತ್ತು ರಚನೆಯ ಕುರಿತು ತಿಳಿಯುತ್ತದೆ. ಹೊಲೆಯ ಸಮುದಾಯವು ಕನ್ನಡ ನಾಡಿನ ಎಲ್ಲಾ ಕಡೆ ಕಂಡುಬರುತ್ತದೆ. ಸಹಜವಾಗಿ ಆಯಾ ಪರಿಸರದ ಹೊಲೆಯ ಸಾಮಾಜಿಕ ಒಳನುಡಿಯು ಆಯಾ ಪ್ರದೇಶದ ಪ್ರಾದೇಶಿಕ ಒಳನುಡಿಯ ರಚನೆಯನ್ನು ಹೊಂದಿ ಪರಸ್ಪರ ಭಿನ್ನವಾಗಿರುತ್ತದೆ. ಆದ್ದರಿಂದ ಈ ಅಧ್ಯಯನಕ್ಕೆ ಯಾದಗಿರಿ ಪರಿಸರದ ಪ್ರಾದೇಶವನ್ನು ಮಾತ್ರ ಆಯ್ಕೆಮಾಡಿಕೊಳ್ಳಲಾಗಿದೆ. ಇದರಿಂದ ಯಾದಗಿರಿ ಪರಿಸರದ ಹೊಲೆಯ ಸಮುದಾಯವು ಬಳಸುವ ಕನ್ನಡ ಭಾಷೆಯ ಬಳಕೆ ಮತ್ತು ರಚನೆಯ ಕುರಿತು ತಿಳಿಯುವುದಾಗಿದೆ.

ಯಾದಗಿರಿಯ ಸುತ್ತ-ಮುತ್ತಲಿನ ಜನರು ಸಂವಹನ ಮತ್ತು ವ್ಯವಹಾರಕ್ಕೆ ಬಳಸುವ ಕನ್ನಡವೇ ಯಾದಗಿರಿ ಪರಿಸರದ ಕನ್ನಡವಾಗಿದೆ. ಕನ್ನಡ ನಾಡಿನಲ್ಲಿ ಅನೇಕ 'ಕನ್ನಡಂಗಳ್' ಎಂಬುವುದು ಕವಿರಾಜಮಾರ್ಗಕಾರನ ಮಾತಾಗಿದೆ. ಇಂದು ಕನ್ನಡ ಭಾಷೆಯಲ್ಲಿರುವ ಅನೇಕ ಪ್ರಾದೇಶಿಕ ಕನ್ನಡ ಒಳನುಡಿಗಳು ಮತ್ತು ಸಾಮಾಜಿಕ ಒಳನುಡಿಗಳು ಶ್ರೀವಿಜಯನ ಮಾತಿಗೆ ಸಾಕ್ಷಿಯಾಗಿವೆ. ಅಂತಹ ಕನ್ನಡಗಳಲ್ಲಿ ಯಾದಗಿರಿ ಪರಿಸರದ ಕನ್ನಡವು ಒಂದಾಗಿದೆ.

ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿರುವ ಬಹುವಚನ ಪ್ರತ್ಯಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ.

## 1 ಇದುವರೆಗಿನ ಅಧ್ಯಯನಗಳು

ಯಾದಗಿರಿ ಕನ್ನಡವನ್ನು ಅಂದು ಗುಲ್ಬರ್ಗಾ ಕನ್ನಡ ಎಂದುಕೊಂಡು ಅಧ್ಯಯನಗಳು ನಡೆದಿದ್ದವು. ಆನಂತರ ಯಾದಗಿರಿಯ ಕನ್ನಡವು ಕಲಬುರಗಿ ಕನ್ನಡಕ್ಕಿಂತ ಭಿನ್ನವಿದೆ ಎಂದು ಕೆಲವು ಭಾಷಾವಿಜ್ಞಾನಿಗಳು ಗುರುತಿಸಿದ್ದಾರೆ.

eISBN: 978-81-686924-4-2

ಆದ್ದರಿಂದ ಈಗ ಯಾದಗಿರಿ ಕನ್ನಡ ಎಂದೇ ಕೆಲವು ಲೇಖನಗಳು, ಒಂದು ಸಂಶೋಧನ ಕೃತಿ ಮತ್ತು ಒಂದು ಎಂ. ಎ ನಿಬಂಧವು ಬಂದಿದೆ. ಈ ಪರಿಸರಕ್ಕೆ ಸಂಬಂಧಿಸಿದ ಕೆಲವು ಭಾಷಿಕ ಲೇಖನಗಳು ಧ್ವನಿ, ಧ್ವನಿಮಾ, ಆಕೃತಿಮಾ ಮತ್ತು ವಾಕ್ಯಗಳ ಕುರಿತು ರಚಿಸಲಾಗಿದೆ. ಆಜಪ್ಪ ಬಾಬು ಅವರ ಸಂಶೋಧನ ಕೃತಿಯಾದ 'ಯಾದಗಿರಿ ಪರಿಸರದ ಕನ್ನಡ ನಾಮಪದಗಳು' ಈ ಕೃತಿಯಲ್ಲಿ ಧ್ವನಿ, ಧ್ವನಿಮಾ, ಆಕೃತಿಮಾ, ಪದರೂಪ ಪ್ರತ್ಯಯ, ಯಾದಗಿರಿಯ ನಾಮಪದಗಳ ವರ್ಗೀಕರಣ ಇವುಗಳ ಜೊತೆಗೆ ಬಹುವಚನ ಪ್ರತ್ಯಯಗಳ ಕುರಿತು ಹೇಳಿದ್ದಾರೆ. ಆದರೆ ಯಾದಗಿರಿ ಪರಿಸರದ ಯಾವುದೇ ಸಮುದಾಯದ ಭಾಷೆಗಳ ಕುರಿತು ಯಾವುದೇ ಬರಹ ಇಲ್ಲಿವರೆಗೂ ಬಂದಿಲ್ಲ. ಆದ್ದರಿಂದ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿನ ಬಹುವಚನ ಪ್ರತ್ಯಯಗಳ ಕುರಿತು ತಿಳಿದುಕೊಳ್ಳುವುದಕ್ಕೆ ಈ ಲೇಖನ ಮಹತ್ವದಾಗಿದೆ.

**ಮಾಹಿತಿ ಸಂಗ್ರಹ:**

ಯಾದಗಿರಿ ಪರಿಸರದ ವಿವಿಧ ಭಾಗಗಳಿಂದ ಕೆಲವು ಪ್ರದೇಶಗಳನ್ನು ಗುರುತು ಮಾಡಿಕೊಂಡು, ಆ ಪ್ರದೇಶದಲ್ಲಿರುವ ಹೊಲೆಯ ಸಮುದಾಯವನ್ನು ಮಾತ್ರ ಆಯ್ಕೆಮಾಡಿಕೊಳ್ಳಲಾಗಿದೆ. ಆಯ್ಕೆಮಾಡಿಕೊಂಡ ಪ್ರದೇಶಗಳಿಂದ ಮಧ್ಯವಯಸ್ಸಿನ, ಕಡಿಮೆ ಶಿಕ್ಷಣ ಪಡೆದಂತಹ ಮತ್ತು ಕನಿಷ್ಠ ಮೂರು ತಲೆಮಾರಿನಿಂದ ಅಲ್ಲೇ ನೆಲೆಸಿರುವಂತ ಹಾಗು ಹೊರ ಪ್ರದೇಶ ಸಂಪರ್ಕ ಇಲ್ಲದಿರುವಂತ ಒಂದು ಗಂಡು ಮತ್ತು ಒಂದು ಹೆಣ್ಣು ಎಂದು ಆಯ್ಕೆಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಭಾಷಾವಿಜ್ಞಾನದಲ್ಲಿ ಅತೀ ಹೆಚ್ಚು ಬಳಕೆಯಿರುವ ಪ್ರಶ್ನಾವಳಿ ಮತ್ತು ಈ ಸಮುದಾಯದಲ್ಲಿನ ಜನಪದ ಸಾಹಿತ್ಯ, ಹಾಡು, ಕಥೆಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಬಳಸಿಕೊಂಡು ಬಹುವಚನ ಪ್ರತ್ಯಯಗಳ ಬಳಕೆಯನ್ನು ವರ್ಣನಾತ್ಮಕ ವಿಧಾನದಲ್ಲಿ ಚರ್ಚಿಸಲಾಗಿದೆ.

**ಬಹುವಚನ ಪ್ರತ್ಯಯಗಳು:**

ಕನ್ನಡ ಭಾಷೆಯಲ್ಲಿ ಎರಡು ವಚನಗಳಿವೆ. ಒಂದು ಏಕವಚನ ಮತ್ತೊಂದು ಬಹುವಚನವಾಗಿದೆ. ಸಾಮಾನ್ಯವಾಗಿ ಏಕವಚನವು ನಾಮಪದದ ಮೂಲ ರೂಪದಲ್ಲಿಯೇ ಇರುತ್ತದೆ. ಆದರೆ ನಾಮಪದದ ಮೂಲ ರೂಪಕ್ಕೆ ಬಹುವಚನ ಪ್ರತ್ಯಯಗಳು ಅಂಟಿಕೊಂಡು ಏಕವಚನವನ್ನು ಬಹುವಚನವಾಗಿ ಮಾರ್ಪಡಿಸುತ್ತವೆ. ನಾಮಪದ, ಸರ್ವನಾಮ, ಸಂಖ್ಯೆವಾಚಕ ಮತ್ತು ಸಂಬಂಧವಾಚಕ ಪದಗಳ ಮೇಲೆ ಬಹುವಚನ ಪ್ರತ್ಯಯಗಳು ಬರುವುದನ್ನು ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಕಂಡುಬಂದಿವೆ. ಅವುಗಳನ್ನು ಮಾನವ ಮತ್ತು ಮಾನವೇತರ ಬಹುವಚನ ಪ್ರತ್ಯಯಗಳು ಎಂದು ವಿಭಾಗಿಸಿಕೊಂಡು ಅವುಗಳಿಗೆ ಸಂಬಂಧಿಸಿದ ಉದಾಹರಣೆಗಳನ್ನು ಈ ಕೆಳಗೆ ನೀಡಲಾಗಿದೆ. ಈ ಉದಾಹರಣೆಗಳಿಗೆ ಶಿಷ್ಟಕನ್ನಡದ ಹೊಲಿಕೆಯನ್ನು ಕೊಡಲಾಗಿದೆ. ಇದರಿಂದ ಓದುಗರು ಸುಲಭವಾಗಿ ಈ ಪರಿಸರದ ಪದಗಳನ್ನು ಅರ್ಥೈಸಿಕೊಳ್ಳಬಹುದು. ಯಾದಗಿರಿ ಪರಿಸರದ ಹೊಲೆಯರ ಕನ್ನಡವನ್ನು (ಯಾ.ಹೊ.ಕ) ಎಂದು ಮತ್ತು ಶಿಷ್ಟ ಕನ್ನಡವನ್ನು (ಶಿ.ಕ) ಎಂದು ತುಂಡಾಗಿ ಬಳಸಲಾಗಿದೆ.

**ಮಾನವ ಬಹುವಚನ ಪ್ರತ್ಯಯಗಳು:**

ಮನುಷ್ಯ ಮತ್ತು ಅವರ ಸಂಬಂಧಕ್ಕೆ ಸಂಬಂಧಿಸಿದ ಏಕವಚನ ಪದಗಳಿಗೆ ಹತ್ತುವ ಬಹುವಚನ ಪ್ರತ್ಯಯಗಳನ್ನು ಮಾನವ ಸೂಚಿಸುವ ಬಹುವಚನ ಪದಗಳು ಎನ್ನುತ್ತೇವೆ. ಇದರಲ್ಲಿ ಸ್ತ್ರೀಲಿಂಗ ಮತ್ತು ಪುಲ್ಲಿಂಗ ಎಂಬ ವ್ಯತ್ಯಾಸವನ್ನು ಹೊಂದಿವೆ. ಆದರೆ, ಇವೆರಡಕ್ಕೂ ಒಂದೇ ರೀತಿಯ ಬಹುವಚನ ಪ್ರತ್ಯಯ ಸೇರುವುದರಿಂದ ಯಾವುದೇ ಲಿಂಗ ಭಿನ್ನತೆಯನ್ನು ಕಾಣುವುದಿಲ್ಲ. ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿನ ಮಾನವ ಬಹುವಚನ ಪ್ರತ್ಯಯಗಳಾದ -ರು, -ಕಳ್, -ಅರು, -ಆ್ಯರ, -ಗೋಳ, -ಗೋಳ್ರು, -ದೇರ, -ಒಳು, -ಒರ, -ಅಂದಿರು, -ಅಂದ್ರು, -ಗಳ, -ಏರು, -ಗೋಳ,

-ಗಳು ಇವಿಷ್ಟು ಮಾನವ ಬಹುವಚನ ಪ್ರತ್ಯಯಗಳು ಬಳಕೆಯಾಗಿವೆ. ಅವುಗಳಿಗೆ ಉದಾಹರಣೆಗಳನ್ನು ಈ ಕೆಳಗೆ ಕೊಡಲಾಗಿದೆ.

**-ರು** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ರು:**

| | | |
|---|---|---|
| ಮಳ್ಳ+-ರು | ಯಾ.ಹೊ.ಕ | ಮಳ್ರು |
| | ಶಿಷ್ಟ ಕನ್ನಡ | ಮಳ್ಳರು |
| ಕುಂಬಾರ+-ರು | ಯಾ.ಹೊ.ಕ | ಕುಂಬಾರ್ರು |
| | ಶಿ.ಕ | ಕುಂಬಾರರು |

**-ಕಳ** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಕಳ:**

| | | |
|---|---|---|
| ಮಗು+-ಕಳ | ಯಾ.ಹೊ.ಕ | ಮಕ್ಳ |
| | ಶಿ.ಕ | ಮಕ್ಕಳು |

**-ಆ್ಯರ** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಆ್ಯರ:**

| | | |
|---|---|---|
| ಕೊರವ+-ಆ್ಯರ | ಯಾ.ಹೊ.ಕ | ಕೊರವ್ಯಾರ |
| | ಶಿ.ಕ | ಕೊರವರು |
| ಕಬ್ಬಲ್ಗ+-ಆ್ಯರ | ಯಾ.ಹೊ.ಕ | ಕಬ್ಬಲಿಗ್ಯಾರ |
| | ಶಿ.ಕ | ಕಬ್ಬಲಿಗರು |

**-ಗೋಳು** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಗೋಳು:**

| | | |
|---|---|---|
| ಕೂಸು+-ಗೋಳು | ಯಾ.ಹೊ.ಕ | ಕೂಸ್ಗೋಳು |
| | ಶಿ.ಕ | ಕೂಸುಗಳು |
| ಸ್ವಾಮಿ+-ಗೋಳು | ಯಾ.ಹೊ.ಕ | ಸ್ವಾಮಿಗೋಳು |
| | ಶಿ.ಕ | ಸ್ವಾಮಿಗಳು |

**-ಗೋಳ್ರು** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಗೋಳ್ರು:**

| | | |
|---|---|---|
| ಅಯ್ಯ+-ಗೋಳ್ರು | ಯಾ.ಹೊ.ಕ | ಅಯ್ಗೋಳ್ರು |

ಶಿ.ಕ ಅಯ್ಯಗಳು

**-ಒಳು** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಒಳು:**

ಚಿಕ್ಕ+-ಒಳು (ಚುಕ್ಕೊಳು) ಯಾ.ಹೊ.ಕ ಚುಕ್ಕೊಳು

ಶಿ.ಕ ಚಿಕ್ಕ ಹುಡುಗರು

(ಚಿಕ್ಕ ಎಂಬ ಮೂಲ ರೂಪಕ್ಕೆ ಇ>ಉ ಪ್ರತ್ಯಯ ಸೇರಿ ಚುಕ್ಕೊಳು ಆಗಿ ಬಳಕೆಗೊಂಡಿದೆ.)

**-ಅರು** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಅರು:**

ತಮ್ಮ+-ಅರು ಯಾ.ಹೊ.ಕ ತಮ್ಮರು

ಶಿ.ಕ ತಮ್ಮಂದಿರು

ಮಾದ್ಗ+-ಅರು ಯಾ.ಹೊ.ಕ ಮಾದ್ಗರು

ಶಿ.ಕ ಮಾದಿಗರು

**-ದೇರ** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ದೇರ:**

ಅಕ್ಕ+-ದೇರ ಯಾ.ಹೊ.ಕ ಅಕ್ಕದೇರ

ಶಿ.ಕ ಅಕ್ಕಂದಿರು

ತಮ್ಮ+-ದೇರ ಯಾ.ಹೊ.ಕ ತಮ್ಮದೇರ

ಶಿ.ಕ ತಮ್ಮಂದಿರು

**-ಓರ** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಓರ:**

ಅವ್ವ+-ಒರ ಯಾ.ಹೊ.ಕ ಅವ್ವೋರ

ಶಿ.ಕ ಅಮ್ಮನವರು

ಅಣ್ಣ+-ಒರ ಯಾ.ಹೊ.ಕ ಅಣ್ಣೋರ

**-ಅಂದ್ರು** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಅಂದ್ರು:**

ಅಣ್ಣ+-ಅಂದ್ರು ಯಾ.ಹೊ.ಕ ಅಣ್ಣಂದ್ರು

ಶಿ.ಕ ಅಣ್ಣಂದಿರು

ಅಕ್ಕ+-ಅಂದ್ರು ಯಾ.ಹೊ.ಕ ಅಕ್ಕಂದ್ರು

ಶಿ.ಕ ಅಕ್ಕಂದಿರು

**-ಅಂದಿರು** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಅಂದಿರು:**

| | | |
|---|---|---|
| ಅಳಿಯ+-ಅಂದಿರು | ಯಾ.ಹೊ.ಕ | ಅಳಿಯಂದಿರು |
| | ಶಿ.ಕ | ಅತ್ತಿಯರು |
| ಮಾವ+-ಅಂದಿರು | ಯಾ.ಹೊ.ಕ | ಮಾವಂದಿರು |
| | ಶಿ.ಕ | ಮಾವನರು |

**-ಗಳ** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಗಳ:**

| | | |
|---|---|---|
| ಕೋಡಿ+-ಗಳ | ಯಾ.ಹೊ.ಕ | ಕೋಡಿಗಳ |
| | ಶಿ.ಕ | ಕೋಡಿಗಳು |

**-ಏರು** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಏರು:**

| | | |
|---|---|---|
| ತಂಗಿ+-ಏರು | ಯಾ.ಹೊ.ಕ | ತಂಗೇರು |
| | ಶಿ.ಕ | ತಂಗಿಯರು |
| ವಾರಿಗೆ+-ಏರು | ಯಾ.ಹೊ.ಕ | ವಾರ್ಗೇರು |
| | ಶಿ.ಕ | ಸಮ ವಯಸ್ಕರರು |

(ವಾರಿಗೆ ಎಂದರೆ ಸಮ ವಯಸ್ಕ ಎಂದರ್ಥ. ಈ ಪದಕ್ಕೆ 'ಏರು' ಬಹುವಚನ ಪ್ರತ್ಯಯ ಹತ್ತಿಕೊಂಡು ವಾರ್ಗೇರು ಎಂದಾಗಿದೆ)

**-ಗೋಳ** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಗೋಳ:**

| | | |
|---|---|---|
| ಪಾರ+-ಗೋಳ | ಯಾ.ಹೊ.ಕ | ಪಾರ್ಗೋಳ |
| | ಶಿ.ಕ | ಚಿಕ್ಕ ಹುಡುಗರು |
| ಗಿರಾಕಿ+-ಗೋಳ | ಯಾ.ಹೊ.ಕ | ಗಿರಾಕಿಗೋಳ |
| | ಶಿ.ಕ | ಗ್ರಾಹಕರು |

**-ಗಳು** ಬಹುವಚನ ಪ್ರತ್ಯಯವು ಮಾನವರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಗಳು:**

| | | |
|---|---|---|
| ನರ್ಸ+-ಗಳು | ಯಾ.ಹೊ.ಕ | ನರ್ಸಗಳು |
| | ಶಿ.ಕ | |
| ಕೂಸು+-ಗಳು | ಯಾ.ಹೊ.ಕ | ಕೂಸ್ಗಳು |

| | | |
|---|---|---|
| | ಶಿ.ಕ | ಕೂಸುಗಳು |

**ಮಾನವೇತರ ಬಹುವಚನ ಪ್ರತ್ಯಯಗಳು:**

ಪ್ರಾಣಿ, ಪಕ್ಷಿ, ವಸ್ತು, ಸ್ಥಳ ಮುಂತಾದವುಗಳಿಗೆ ಸಂಬಂಧಿಸಿದ ಪದಗಳನ್ನು ಮಾನವೇತರ ಬಹುವಚನಗಳೆಂದು ಕರೆಯಲಾಗಿದೆ. ಇಲ್ಲಿ ಮನುಷ್ಯರಿಗೆ ಸಂಬಂಧಿಸಿದ ಪದಗಳನ್ನು ಬಿಟ್ಟು ಉಳಿದೆಲ್ಲ ಪದಗಳು ಮಾನವೇತರ ಎಂದಾಗುತ್ತವೆ. -ಗಳು, -ಗೋಳು ಈ ಪ್ರತ್ಯಯಗಳು ಮಾನವೇತರ ಪದಗಳಿಗೆ ಬಹುವಚನದ ಪ್ರತ್ಯಯಗಳಾವೆ. ಅವುಗಳಿಗೆ ಉದಾಹರಣೆಗಳನ್ನು ಈ ಕೆಳಗೆ ನೀಡಲಾಗಿದೆ.

**-ಗಳು** ಬಹುವಚನ ಪ್ರತ್ಯಯವು ಮಾನವೇತರರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಗಳು:**

| | | |
|---|---|---|
| ಕುರಿ+-ಗಳು | ಯಾ.ಹೊ.ಕ | ಕುರಿಗಳು |
| | ಶಿ.ಕ | ಕುರಿಗಳು |
| ಕತ್ತಿ+-ಗಳು | ಯಾ.ಹೊ.ಕ | ಕತ್ತಿಗಳು |
| | ಶಿ.ಕ | ಕತ್ತೆಗಳು |

**-ಗೋಳು** ಬಹುವಚನ ಪ್ರತ್ಯಯವು ಮಾನವೇತರರಿಗೆ ಸಂಬಂಧಿಸಿದ ಬಹುವಚನ ಪ್ರತ್ಯಯವಾಗಿ ಯಾದಗಿರಿ ಪರಿಸರದ ಹೊಲೆಯರ ಕನ್ನಡದಲ್ಲಿ ಬಳಕೆಯಾಗಿದೆ.

**-ಗೋಳು:**

| | | |
|---|---|---|
| ಮರಿ+-ಗೋಳು | ಯಾ.ಹೊ.ಕ | ಮರಿಗೋಳು |
| | ಶಿ.ಕ | ಮರಿಗಳು |
| ದನ+-ಗೋಳು | ಯಾ.ಹೊ.ಕ | ದನಗೋಳು |
| | ಶಿ.ಕ | ಹಸುಗಳು |

-ಗಳು ಮತ್ತು -ಗೋಳು ಬಹುವಚನ ಪ್ರತ್ಯಯಗಳು ಮಾನವ ಮತ್ತು ಮಾನವೇತರ ಎರಡರಲ್ಲಿಯೂ ಬಳಕೆಯಾಗಿವೆ. -ಕಳ್, -ಒರು, -ಗಳ, -ಗೋಳ್ರು ಮಾನವ ಬಹುವಚನ ಪ್ರತ್ಯಯಗಳು ತೆಗೆದುಕೊಂಡ ದತ್ತಾಂಶದಲ್ಲಿ ಒಂದೊಂದೆ ನಾಮಪದಗಳಿಗೆ ಬಳಕೆಯಾಗಿರುವುದು ಕಂಡುಬಂದಿವೆ. ಮಾನವ ಸೂಚಿಸುವ ಬಹುವಚನ ಪ್ರತ್ಯಯಗಳಲ್ಲಿ ಒಟ್ಟು ಹದಿನೇಳು ಮತ್ತು ಮಾನವೇತರ ಸೂಚಿಸುವ ಬಹುವಚನ ಪ್ರತ್ಯಯಗಳಲ್ಲಿ ಎರಡು ಮಾತ್ರ ಬಳಕೆಯಾಗಿವೆ.

**ಪರಾಮರ್ಶನ ಗ್ರಂಥಗಳು:**

1. ಆಜಪ್ಪ ಬಾಬು. ಯಾದಗಿರಿ ಪರಿಸರದ ಕನ್ನಡ ನಾಮಪದಗಳು (ಪಿ. ಎಚ್. ಡಿ ಪದವಿಗಾಗಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ) ಅಪ್ರಟಿತ.

ಓಂಕಾರಪ್ಪ ಸಿ. ೨೦೧೪, ಕುಮಾರವ್ಯಾಸ ಭಾರತ (ಭಾಷಾ ವೈಜ್ಞಾನಿಕ ವಿಶ್ಲೇಷಣೆ), ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು.

ಕುಳ್ಳಿ ಜಿ. ಎಸ್, ೧೯೭೧, ವರ್ಣನಾತ್ಮಕ ಭಾಷಾವಿಜ್ಞಾನ, ಸಿರಿಗನ್ನಡ ಪ್ರಕಾಶನ, ಧಾರವಾಡ.

ಕೋಡಗುಂಟಿ ಬಸವರಾಜ, ೨೦೧೮, ಕನ್ನಡ (ಹಯ್ದರಾಬಾದ ಕರ್ನಾಟಕ ಸಾಲು-ಸಂ,೪), ಬಂಡಾರ ಪ್ರಕಾಶನ ಮಸ್ಕಿ.

ಕೋಡಗುಂಟಿ ಬಸವರಾಜ, ೨೦೧೯ (ಜುಲೈ-ಡಿಸೆಂಬರ್), ಯಾದಗಿರಿ ಪರಿಸರದ ಕನ್ನಡದಾಗ ೮ ಕೊನೆ ಪದಗಳು, (ಲೇಖನ), ಕರ್ನಾಟಕ ಲೋಚನ, ಷಾಣ್ಮಾಸಿಕ ವಿದ್ವತ್ ಪತ್ರಿಕೆ.

ನಾಗರಾಜ, ೨೦೦೭ ಬಸವಣ್ಣನವರ ವಚನಗಳ ವರ್ಣನಾತ್ಮಕ ವ್ಯಾಕರಣ (ಪಿ.ಎಚ್.ಡಿ ಪದವಿಗಾಗಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ) ಅಪ್ರಕಟಿತ.
ಭಟ್ ಡಿ.ಎನ್. ಶಂಕರ ೨೦೧೧, ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ. ಭಾಷಾ ಪ್ರಕಾಶನ, ಆರಗ, ತೀರ್ಥಹಳ್ಳಿ.
ಮಹಾದೇವನ್ ಆರ್. ೧೯೬೮, Gulbarga Kannada (Brahmin Dialect), ಡೆಕ್ಕನ್ ಕಾಲೇಜು, ಪೂನಾ.
ರಾಮಚಂದ್ರರಾವ್ ಬಿ. ೨೦೧೧, ಕನ್ನಡ ಭಾಷೆಯ ಇತಿಹಾಸ, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.
ಶ್ರೀಧರ ಎಸ್. ಎನ್, ೧೯೯೦, Kannada, ರೊಟಲೆಡ್ಜ್, ಲಂಡನ್ ಮತ್ತು ನ್ಯೂಯಾರ್ಕ.

## YOUR DISSERTATION DESERVES RECOGNITION, NOT A PLACE IN A STOREROOM

**Publish Your Dissertation as a Book through the Emerging Scholars Series**

Transform your thesis or dissertation into a professionally published scholarly work, boosting its academic visibility and impact.

**Benefits**

📚 ISBN Registration*
🆔 Crossref DOI Assignment
🟢 ORCID Integration
🎓 Google Scholar Discoverability
📈 Enhanced Citation Opportunities
🌍 Wider Academic Reach and Recognition
🔒 Long-Term Preservation and Accessibility

**Publication Options**

| Jnanasetu Repository | Jnanasetu Repository Publication with an ISBN |
|---|---|
| ✓ Crossref DOI Assignment<br>✓ Online Archiving and Preservation<br>✓ Academic Visibility<br>✓ Citations | ✓ ISBN Registration<br>✓ Crossref DOI Assignment<br>✓ Professional Book Publication<br>✓ Global Accessibility<br>✓ Academic Visibility<br>✓ Citations |

## Looking to Publish Research Articles?

Researchers and scholars may also submit manuscripts to **Jnanasetu Journals** for quality-focused scholarly publication.

✓ Peer-Reviewed Journals
✓ DOI Assignment
✓ Open Access Publishing
✓ Academic Visibility
✓ Timely Editorial Processing

**We Also Publish**

📖 Edited Books
📚 Scholarly Monographs
📝 Conference Proceedings
🔬 Academic Journals

**For more details:**

| | | |
|---|---|---|
| **Press** | jnanasetupress.com | support@jnanasetupress.com |
| **Repository** | jnanaseturepository.com | editor@jnanaseturepository.com |
| **Journals** | jnanasetujournals.com | editor@jnanasetujournals.com |